


ಮ್ಯಾಕ್‌ಬೆತ್‌ನ
ದುರಂತ
The Tragedy of Macbeth
ಸಪ್ನ


ಮ್ಯಾಕ್‌ಬೆತ್‌ನ ದುರಂತ
The Tragedy of Macbeth
ಸಪ್ನ

*A Shakespeare Children's Story*
**The Tragedy of Macbeth**
Translated to Kannada by : L.S. Seshagiri Rao
(KB - 2395)

Published by :
**Sapna Book House (P) Ltd.,**
R.O. #11, 3rd Main Road,
Gandhinagar, Bengaluru- 560 009
Ph: 080-40114455

ISBN : 978-93-86631-96-1

**First Edition : 2017**

Pages : 64
Book Size : 1-8th Demi
Paper Used : 18.6 kg (70 gsm) N.S. Maplitho

Copyright © Macaw Books, 2012
*Licensor :*
**Sweet Cherry Publishing Limited, 2015**
Unit E, Vulcan Business Complex,
Vulcan Road,
Leicester, LE5 3EB,
United Kingdom

*Licensee :*
**Sapna Book House (P) Ltd., India 2015**

All rights reserved. No part of this publication may be reproduced or utilized in any form or by any means, electronic or mechanical, including photocopying, recording, or using any information storage and retrieval system, without prior permission in writing from the publisher.



## ಷೇಕ್ಸ್‌ಪಿಯರ್

ಇಂಗ್ಲಿಷ್ ಭಾಷೆಯಲ್ಲಿ ಅತ್ಯಂತ ಶ್ರೇಷ್ಠ ಬರಹಗಾರ ಎನಿಸಿಕೊಂಡ ವಿಲಿಯಂ ಷೇಕ್ಸ್‌ಪಿಯರ್ ಇಂಗ್ಲೆಂಡ್‌ನ ವಾರ್‌ವಿಕ್‌ಷೈರ್‌ನಲ್ಲಿರುವ ಸ್ಟ್ರಾಟ್‌ಫರ್ಡ್-ಅನ್-ಏವನ್‌ನಲ್ಲಿ (ಸುಮಾರು 1564ರ ಏಪ್ರಿಲ್ 23ರಂದು) ಹುಟ್ಟಿದ. ಜಾನ್ ಮತ್ತು ಮೇರಿ ಷೇಕ್ಸ್‌ಪಿಯರ್ ದಂಪತಿಗಳ ಎಂಟು ಮಕ್ಕಳಲ್ಲಿ ಇವನು ಮೂರನೆಯವನು.

ಷೇಕ್ಸ್‌ಪಿಯರ್ ಕವಿ, ರಂಗಭೂಮಿಗೆ ನಾಟಕಗಳನ್ನು ಬರೆದವನು ಮತ್ತು ನಾಟಕಕಾರ. ಅವನನ್ನು ಇಂಗ್ಲೆಂಡ್‌ನ ರಾಷ್ಟ್ರಕವಿ ಎಂದೂ 'ಏವನ್‌ನ ಕವಿ' ಎಂದೂ ಕರೆಯುತ್ತಾರೆ. ಅವನು 38 ನಾಟಕಗಳನ್ನು, 154 ಸುನೀತಗಳನ್ನು, ಎರಡು ದೀರ್ಘ ವೃತ್ತಾಂತ ಕವನಗಳನ್ನು ಬರೆದನೆಂದು ಹೇಳುತ್ತಾರೆ. ಷೇಕ್ಸ್‌ಪಿಯರ್ ನಾಟಕಗಳನ್ನು ಜಗತ್ತಿನಲ್ಲಿ ಬಳಕೆಯಲ್ಲಿರುವ ಪ್ರತಿಯೊಂದು ಭಾಷೆಗೂ ಅನುವಾದ ಮಾಡಿದ್ದಾರೆ. ಜಗತ್ತಿನ ಬೇರಾವುದೇ ನಾಟಕಕಾರನ ನಾಟಕಗಳಿಗಿಂತ ಇವನ ನಾಟಕಗಳು ಹೆಚ್ಚು ಅಭಿನಯವಾಗುತ್ತಿವೆ.



ಮ್ಯಾಕ್‌ಬೆತ್ : ಇವನು ಸ್ಕಾಟ್ಲೆಂಡ್‌ನ ಒಬ್ಬ ಜನರಲ್. ಗ್ಲ್ಯಾಮಿಸ್‌ನ ಥೇನ್. ಇವನು ಕಾಡರ್‌ನ ಥೇನ್ ಆಗುತ್ತಾನೆ ಎಂಬ ಮಾಟಗಾತಿಯರ ಭವಿಷ್ಯವಾಣಿ ನಿಜವಾದ ಮೇಲೆ ಇವನು ಕೊಲೆಯ ಮೇಲೆ ಕೊಲೆ ಮಾಡುತ್ತಾ ಹೋಗುತ್ತಾನೆ. ಇವನು ಶೂರ ಯೋಧ ಮತ್ತು ಶಕ್ತಿವಂತ. ಆದರೆ ಆಸೆಗೆ ಸುಲಭವಾಗಿ ಬಲಿಯಾಗುತ್ತಾನೆ.



ಲೇಡಿ ಮ್ಯಾಕ್‌ಬೆತ್ : ಇವಳು ಬಹು ಮಹತ್ವಾಕಾಂಕ್ಷೆಯ ಹೆಂಗಸು; ಅಧಿಕಾರ ಮತ್ತು ಉನ್ನತ ಪದವಿಗಾಗಿ ಏನು ಬೇಕಾದರೂ ಮಾಡುತ್ತಾಳೆ. ಕಥೆಯ ಪ್ರಾರಂಭದಲ್ಲಿ ಅವಳು ನಿಷ್ಕರುಣಿ ಆದರೆ ಅನಂತರ ಹುಚ್ಚಿಯಾಗುತ್ತಾಳೆ ಮತ್ತು ತನ್ನ ಪಾಪಕ್ಕೆ ಬಲಿಯಾಗುತ್ತಾಳೆ.

ineffective



ಮೂವರು ಮಾಟಗಾತಿಯರು : ಇವರು ಮೂವರು ಕುರೂಪಿ ನಿಗೂಢ ಮುದುಕಿಯರು. ತಮ್ಮ ಮಂತ್ರಗಳನ್ನು, ಭವಿಷ್ಯವಾಣಿಯನ್ನು ಬಳಸಿ ಮ್ಯಾಕ್‌ಬೆತ್‌ನ ವಿರುದ್ಧ ಪಿತೂರಿ ಮಾಡುತ್ತಾರೆ. ಅವರ ಭವಿಷ್ಯವಾಣಿಯು ಕೊಲೆ ಮಾಡಲು ಮ್ಯಾಕ್‌ಬೆತ್‌ನನ್ನು ಪ್ರಚೋದಿಸುತ್ತದೆ.

ಮ್ಯಾಕ್‌ಡಫ್ : ಇವನೊಬ್ಬ ಸ್ಕಾಟ್ಲೆಂಡ್‌ನ ಶ್ರೀಮಂತ. ಇವನು ಮ್ಯಾಕ್‌ಬೆತ್‌ನ ಆಡಳಿತ ವಿರೋಧಿ. ತನ್ನ ಹೆಂಡತಿ ಮತ್ತು ಮಗುವನ್ನು ಕೊಲೆ ಮಾಡಿದುದಕ್ಕಾಗಿ ಮ್ಯಾಕ್‌ಬೆತ್‌ನ ವಿರುದ್ಧ ಪ್ರತೀಕಾರ ಮಾಡುತ್ತಾನೆ.

Repuliaten



## ದ ಟ್ರ್ಯಾಜಿಡಿ ಆಫ್ ಮ್ಯಾಕ್‌ಬೆತ್

ಸ್ಕಾಟ್ಲೆಂಡ್‌ನ ಶ್ರೇಷ್ಠ ಅರಸ ಡಂಕನ್‌ನ ಆಳ್ವಿಕೆಯಲ್ಲಿ ಒಬ್ಬ ಬಹು ಸಮರ್ಥ ಮತ್ತು ವೀರ ಥೇನ್ (ರಾಜ್ಯದ ಒಬ್ಬ ಪ್ರಮುಖ) ಇದ್ದ. ಅವನ ಹೆಸರು ಮ್ಯಾಕ್‌ಬೆತ್.

Conpiracy







ಅವನು ರಾಜನಿಗೆ ಸಮೀಪದವನಾಗಿದ್ದ ಮಾತ್ರವಲ್ಲ ಯುದ್ಧಕಾಲದಲ್ಲಿ ಅವನು ಬಹು ಸಮರ್ಥ ಜನರಲ್ ಆಗಿದ್ದ. ಬಹುಶಕ್ತ ಮತ್ತು ದೊಡ್ಡ ಸೈನ್ಯಗಳನ್ನು ಸೋಲಿಸಬಲ್ಲ ಸಮರ್ಥ ಅವನೊಬ್ಬನೇ; ಅವರನ್ನು ನಿರಾಸೆಯ ಮತ್ತು ಹೆದರಿಕೆಯ ಸ್ಥಿತಿಗೆ ತಂದುಬಿಡುತ್ತಿದ್ದ.

ಸ್ವಲ್ಪ ಕಾಲದ ಮೊದಲು ಡಂಕನ್‌ಗೆ ವಿರುದ್ಧವಾಗಿ ಕಾಡರ್‌ನ ಥೇನ್ ಎನ್ನುವವನು ದಂಗೆ ಎದ್ದಿದ್ದ.



ಅವರ ಶತ್ರು ನಾರ್ವೆಯ ಅರಸನ ಸೈನ್ಯಗಳು ದಂಗೆಕೋರರಿಗೆ ನೆರವಾಗಿದ್ದರು. ಆದರೆ ಧೀರ ಮ್ಯಾಕ್‌ಬೆತ್‌ನು ಯಾವುದೇ ಅಪಾಯದಿಂದ ವಿಚಲಿತನಾಗುತ್ತಿರಲಿಲ್ಲ. ಕೆಲವೇ ದಿನಗಳಲ್ಲಿ ಥೇನನ ಸೈನ್ಯ ಸಂಪೂರ್ಣವಾಗಿ ಸೋತು ಸ್ಕಾಟ್ಲೆಂಡ್‌ನ ಸೈನ್ಯ ವಿಜಯಿಯಾಯಿತು. distracted

ಮ್ಯಾಕ್‌ಬೆತ್‌ನ ಕಥೆ ಈ ಯುದ್ಧದಿಂದ ಪ್ರಾರಂಭವಾಗುತ್ತದೆ.


ಯುದ್ಧರಂಗದಿಂದ ತನ್ನ ಸ್ನೇಹಿತ ಉದಾತ್ತ ಸ್ವಭಾವದ Noble ಬ್ಯಾಂಕೊನ ಜೊತೆಗೆ ಅವನು ಹಿಂದಿರುಗುತ್ತಿದ್ದ. ಇದ್ದಕ್ಕಿದ್ದಂತೆ ಬಹಳ ವಿಚಿತ್ರವಾಗಿ ಕಾಣುವ ಮೂವರು ಅವರನ್ನು ತಡೆದರು. ಅವರು ಕಂಗೆಟ್ಟಿದ್ದು ನಡೆಯುತ್ತಿದ್ದ ಶವಗಳಂತೆ ಕಂಡರು. ಈ ಮಾಟಗಾತಿಯರು ಮೂಳೆಯಾಗಿದ್ದ ತಮ್ಮ ಬೆರಳುಗಳನ್ನು

ಅತಿ ತೆಳುವಾದ ತಮ್ಮ ತುಟಿಗಳಿಗೆ ತಗುಲಿಸಿದರು. ಅನಂತರ ಮೊದಲನೆಯವಳು ಅವರತ್ತ ತಿರುಗಿ, "ಗ್ಲಾಮಿಸ್‌ನ ಥೇನ್ ಆಗಿರುವ ಮ್ಯಾಕ್‌ಬೆತ್‌ಗೆ ಸ್ವಾಗತ" ಎಂದಳು. ಮ್ಯಾಕ್‌ಬೆತ್‌ಗೆ ಇದರಿಂದ ಆಶ್ಚರ್ಯವಾಗಲಿಲ್ಲ.









ಅವನು ಗ್ಲಾಮಿಸ್‌ನ ಥೇನ್ ಆಗಿದ್ದುದರಿಂದ ಈ ಮುದುಕಿಯರು ಅವನ ಗುರುತು ಹಿಡಿದಿರಬೇಕು ಎಂದು ಭಾವಿಸಿದ. ಆದರೆ ಅನಂತರ ಅವರು ಆಡಿದ ಮಾತು ಮ್ಯಾಕ್‌ಬೆತ್ ಮತ್ತು ಬ್ಯಾಂಕೊ ಇಬ್ಬರಿಗೂ ಆಘಾತವನ್ನುಂಟು ಮಾಡಿತು.

ಎರಡನೆಯ ಮಾಟಗಾತಿ ಮ್ಯಾಕ್‌ಬೆತ್‌ನ ಬಳಿಗೆ ಬಂದು, "ಕಾಡರ್‌ನ ಥೇನ್ ಆದ ಮ್ಯಾಕ್‌ಬೆತ್‌ಗೆ ಸ್ವಾಗತ," ಎಂದಳು.



response
ಮ್ಯಾಕ್‌ಬೆತ್ ಪ್ರತಿಕ್ರಿಯಿಸುವ ಮೊದಲೇ ಮೂರನೆಯ ಮಾಟಗಾತಿ ಮುಂದಕ್ಕೆ ಬಂದು, "ಮುಂದೆ ರಾಜನಾಗಲಿರುವ ಮ್ಯಾಕ್‌ಬೆತ್‌ಗೆ ಸ್ವಾಗತ," ಎಂದಳು.

ಮೂವರು ಮಾಟಗಾತಿಯರು ಬ್ಯಾಂಕೊನ ಕಡೆಗೆ ತಿರುಗಿ, "ಮ್ಯಾಕ್‌ಬೆತ್‌ಗಿಂತ ಕಡಿಮೆ, ಆದರೂ ಹೆಚ್ಚು" ಎಂದರು. ಅಷ್ಟು ಸುಖಿಯಲ್ಲ, ಆದರೆ ಇನ್ನೂ ಸುಖಿ ಎಂದರು. "ನೀನು ರಾಜನಾಗದಿದ್ದರೂ ನಿನ್ನ ಮಕ್ಕಳು ರಾಜರಾಗುತ್ತಾರೆ" ಎಂದರು.

ದಿಗ್ಭ್ರಮೆಯ ಸ್ಥಿತಿಯಲ್ಲಿದ್ದ ಇಬ್ಬರನ್ನೂ ಬಿಟ್ಟು







ಮೂವರು ಮಾಟಗಾತಿಯರು ಗಾಳಿಯಲ್ಲಿ ವಿಲೀನವಾದರು.

ಮ್ಯಾಕ್‌ಬೆತ್ ಮತ್ತು ಬ್ಯಾಂಕೊ ಮತ್ತೆ ಅರಸ ಡಂಕನನ ಅರಮನೆಗೆ ಹೊರಟರು. ದಾರಿಯಲ್ಲಿ ಡಂಕನನ ಕೆಲವು ಸಿಪಾಯಿಗಳು ಅವನನ್ನು ಕಂಡು ಉತ್ಸಾಹದಿಂದ ಬರಮಾಡಿಕೊಂಡರು.



ಕಾಡರ್‌ನ ಥೇನನು ಡಂಕನನಿಗೆ ದ್ರೋಹ ಮಾಡಿದ್ದರಿಂದ ಮತ್ತು ತನ್ನ ಸೈನ್ಯವನ್ನು ಅರಸನಿಗೆ ವಿರುದ್ಧವಾಗಿ ಬಳಸಿದ್ದರಿಂದ ರಾಜನು ಅವನನ್ನು ಗಲ್ಲಿಗೆ ಹಾಕಲು ತೀರ್ಮಾನಿಸಿದ್ದ ಎಂದು ಸಿಪಾಯಿಗಳು ಮ್ಯಾಕ್‌ಬೆತ್‌ನಿಗೆ ತಿಳಿಸಿದರು. ಬಂದಿದ್ದ ಸಿಪಾಯಿಗಳು



ಹಲವು ವರ್ಷಗಳ ಕಾಲ ಸಿಂಹಾಸನಕ್ಕೆ ನಿಷ್ಠೆ ಮತ್ತು ಪರಾಕ್ರಮದಿಂದ ಸಲ್ಲಿಸಿದ ಸೇವೆಗಾಗಿ ಮ್ಯಾಕ್‌ಬೆತ್‌ನನ್ನು ಹೊಸ ಕಾಡರ್‌ನ ಥೇನ್ ಆಗಿ ಅರಸನು ಮಾಡಿದ್ದ ಎಂದು ಹೇಳಿದರು.

ಮ್ಯಾಕ್‌ಬೆತ್ ಮತ್ತು ಬ್ಯಾಂಕೊ ತಾವು ಕೇಳಿದ್ದನ್ನು ನಂಬಲಾರದೆ ಬಾಯಿ ಬಿಟ್ಟುಕೊಂಡು ಮೂತರ ಕಡೆ ನೋಡಬೇಕಾಯಿತು. ಎರಡನೆ ಮಾಟಗಾತಿ ಮ್ಯಾಕ್‌ಬೆತ್‌ನಿಗೆ ಅವನು ಕೇಡರ್‌ನ ಥೇನ್ ಆಗಿ

ನೇಮಕವಾಗುವುದಾಗಿ ಹೇಳಿ ಬಹು ಸ್ವಲ್ಪ ಕಾಲ ಕಳೆದಿತ್ತು. ಇದು ಹೇಗೆ ಸಾಧ್ಯವಾಯಿತು?

ಇದರಿಂದ ಮ್ಯಾಕ್‌ಬೆತ್‌ನು ಮಾಟಗಾತಿಯರಿಗೆ








ಭವಿಷ್ಯವ ತಿಳಿದಿತ್ತೆ ಎಂದು ಆಶ್ಚರ್ಯಪಡಲು ಪ್ರಾರಂಭಿಸಿದ. ಅವನು ಕಾಡರ್‌ನ ಮುಂದಿನ ಥೇನ್ ಆಗುವನೆಂದು ಅವರು ಹೇಳಿದ್ದರು, ಅದು ನಿಜವಾಯಿತು. ಪ್ರಾಯಶಃ ಅವನು ರಾಜನಾಗುವನೆಂದು ಹೇಳಿದ್ದುದು ನಿಜವಾಗಬಹುದು ಎಂದು ಯೋಚಿಸಿದ. ಅನಂತರ ಇದು ಬರಿಯ ಕಾಕತಾಳೀಯವಾಗಿರಬಹುದು ಎಂದು ತೀರ್ಮಾನಿಸಿದ.

Coincidence







ತಾನು ಕಾಡರ್‌ನ ಥೇನ್ ಆಗಿ ನೇಮಕವಾದದ್ದರಿಂದ ಹರ್ಷದಿಂದ ಉಬ್ಬಿಹೋದ ಮತ್ತು ಇಂತಹ ಸಂತೋಷದ ಸುದ್ದಿಯನ್ನು ತಂದುದಕ್ಕಾಗಿ ದೂತರಿಗೆ ವಂದನೆ ಹೇಳಿದ.

ಅಂದು ಸಂಜೆ ಮ್ಯಾಕ್‌ಬೆತ್‌ನು ಸ್ಕಾಟ್ಲೆಂಡ್‌ನ ಶ್ರೇಷ್ಠ ಅರಸ ಡಂಕನನನ್ನು ನೋಡಿದಾಗ ತನ್ನ ಕೋಟೆಯ ಭವ್ಯ ಗೃಹದಲ್ಲಿ ತನ್ನೊಡನೆ ಒಂದು ದಿನವನ್ನು ಕಳೆಯಬೇಕೆಂದು ಆಹ್ವಾನಿಸಿದ. ಡಂಕನ್ ಕೂಡಲೆ ಒಪ್ಪಿದ.


ಅರಸನ ಆಗಮನಕ್ಕೆ ಕೋಟೆಯ ಗೃಹವನ್ನು ಮ್ಯಾಕ್‌ಬೆತ್ ಸಿದ್ಧಮಾಡಬೇಕಾಯಿತು. ಅವನು ತನ್ನ ಹೆಂಡತಿ ಲೇಡಿ ಮ್ಯಾಕ್‌ಬೆತ್‌ಗೆ ಕಾಗದವನ್ನು ಬರೆದು ಯೋಜನೆಯನ್ನು ತಿಳಿಸಿದ. ಕಾಗದ ಬರೆಯುತ್ತಾ ಅವನು




ಮೂವರು ಮಾಟಗಾತಿಯರು ಮತ್ತು ಅವರ ವಿಚಿತ್ರ ಭವಿಷ್ಯವಾಣಿಯನ್ನು ಕುರಿತು ಬರೆದ, ಅವರು ಹೇಳಿದ ಮೂರು ಭವಿಷ್ಯಗಳಲ್ಲಿ ಒಂದು ಆಗಲೇ ನಿಜವಾಗಿತ್ತು ಎಂದು ಬರೆದ.

ಲೇಡಿ ಮ್ಯಾಕ್‌ಬೆತ್ ಈ ಕಾಗದವನ್ನು ಓದಿದಾಗ ಅವಳ ಮನಸ್ಸು ನಾಗಾಲೋಟದಲ್ಲಿ ಓಡಿತು. ಮತ್ತೇನನ್ನೂ ಕುರಿತು ಯೋಚನೆ ಮಾಡಲು ಅವಳಿಗೆ ಸಾಧ್ಯವಾಗಲಿಲ್ಲ.

Gallop











ಅವಳ ಗಂಡ ಈಗ ಗ್ಲ್ಯಾಮಿಸ್‌ನ ಥೇನ್ ಮಾತ್ರವಲ್ಲ, ಭವಿಷ್ಯವಾಣಿಯಂತೆ ಕಾಡರ್‌ನ ಥೇನ್ ಸಹ ಆಗಿದ್ದ. ಆದ್ದರಿಂದ ಶೀಘ್ರದಲ್ಲಿಯೇ ತನ್ನ ಗಂಡನು ಸ್ಕಾಟ್ಲೆಂಡ್‌ನ ಹೊಸ ರಾಜನಾಗುತ್ತಾನೆ ಎಂಬುದು ಅವಳ ದೃಢ ನಂಬಿಕೆಯಾಗಿತ್ತು.


ಅಂದು ಸಂಜೆ ಡಂಕನ್ ತನ್ನ ಕೋಟೆಯ ಗೃಹಕ್ಕೆ ಬರುತ್ತಿರುವುದರಿಂದ ಅವನನ್ನು ಕೊಲ್ಲುವುದಷ್ಟೇ ಅವರ ಕೆಲಸ.



ಮಾಟಗಾತಿಯರ ಎರಡನೆಯ ಭವಿಷ್ಯವು ನಿಜವಾಗುತ್ತದೆ ಎಂದು ಅವಳಿಗೆ ಎನ್ನಿಸಿತು. ಮ್ಯಾಕ್‌ಬೆತ್‌ನು ರಾಜನಾಗಬೇಕೆಂದು ವಿಧಿಯ ಸಂಕಲ್ಪವಾದರೆ ಆ ರಾತ್ರಿಯೇ ಡಂಕನ್ ಸಾಯಬೇಕಾಗಿತ್ತು.

ಮ್ಯಾಕ್‌ಬೆತ್ ತನ್ನ ಗೃಹಕ್ಕೆ ಹಿಂದಿರುಗಿದಾಗ ಲೇಡಿ ಮ್ಯಾಕ್‌ಬೆತ್ ಅವನಿಗೆ







ತನ್ನ ಯೋಜನೆಗಳನ್ನು ಗುಟ್ಟಾಗಿ ತಿಳಿಸಿದಳು. ಮೊದಮೊದಲು ಡಂಕನನನ್ನು ಕೊಲ್ಲುವ ಯೋಜನೆಯನ್ನು ಮ್ಯಾಕ್‌ಬೆತ್ ಸಂಪೂರ್ಣವಾಗಿ ವಿರೋಧಿಸಿದ. ಏಕೆಂದರೆ ಅವನಿಗೆ ತಾನು ಡಂಕನ್‌ನ ಪ್ರಜೆಯಾಗಿ ಮತ್ತು ಅವನ ಆತಿಥೇಯನಾಗಿ ಅವನನ್ನು ರಕ್ಷಿಸಿ ಕ್ಷೇಮವಾಗಿ ಉಳಿಸುವುದು ತನ್ನ ಕರ್ತವ್ಯ ಎಂದು ಅನ್ನಿಸಿತು. ಆದರೆ ಲೇಡಿ ಮ್ಯಾಕ್‌ಬೆತ್ ಅವನ ನ್ಯಾಯವಾದ ಮಾತುಗಳನ್ನು ಕೇಳಲು ಒಪ್ಪಲಿಲ್ಲ ಮತ್ತು ಕಡೆಗೆ ಅವಳ ಗಂಡನ ಮನಸ್ಸನ್ನು ಒಪ್ಪಿಸಲು ಅವಳಿಗೆ ಸಾಧ್ಯವಾಯಿತು.




ಅಂದು ರಾತ್ರಿ ಡಂಕನ್‌ನನ್ನು ಅವನ ಕೋಣೆಯಲ್ಲಿ ಕೊಲ್ಲಲು ಮ್ಯಾಕ್‌ಬೆತ್ ತನ್ನ ಹೆಂಡತಿಯ ಸಂಜ್ಞೆಯನ್ನು ಕಾಯುತ್ತಿದ್ದಾಗ ತನ್ನ ಮುಂದೆ ಒಂದು ಕಠಾರಿ ತೂಗಾಡುತ್ತಿರುವುದನ್ನು ಕಂಡನು. dagger



logi



ಮೊದಲು ಮ್ಯಾಕ್‌ಬೆತ್ ಅದನ್ನು ಕನಸು ಎಂದುಕೊಂಡನು, ತಾನು ಎದ್ದು ನಿಂತರೆ ಅದು ಮಾಯವಾಗಿ ಹೋಗುತ್ತದೆ ಎಂದುಕೊಂಡನು. ಆದರೆ ಕಠಾರಿಯ ಭ್ರಾಂತಿಯ ನೋಟವು ತನ್ನನ್ನು ಹಿಂಬಾಲಿಸುವುದನ್ನು ಕಂಡಾಗ ತನಗೇನಾಗುತ್ತಿದೆ ಎಂದು ಅವನಿಗೆ ತಿಳಿಯಲಿಲ್ಲ.







logi



"ನಾನು ಕಾಣುತ್ತಿರುವುದು ನನ್ನ ಕಡೆಗೆ ಹಿಡಿದಿರುವ ಕಠಾರಿಯೇ? ಅಥವಾ ಯೋಚನೆಯಿಂದ ಕುದಿಯುತ್ತಿರುವ ಮೆದುಳಿನಿಂದ ಬಂದ ಮನಸ್ಸಿನ ಒಂದು ಸುಳ್ಳು ಸೃಷ್ಟಿಯೆ?" ಎಂದು ತನಗೆ ತಾನೇ ಹೇಳಿಕೊಂಡ. ತನ್ನ ದೌರ್ಬಲ್ಯವನ್ನು ತಡೆಯಲಾರದೆ ಗೋಪುರದ ಗಂಟೆಯು ಬಾರಿಸುತ್ತಿದ್ದಂತೆ ಒಂದು ಎಚ್ಚರಿಕೆಯ ಮಾತನ್ನು ನುಡಿದ. "ಈ ಗಂಟೆಯು ನನ್ನನ್ನು ಆಹ್ವಾನಿಸುತ್ತಿದೆ. ಡಂಕನ್, ಕೇಳು ಆ ಶಬ್ದವನ್ನು, ಏಕೆಂದರೆ ಅದು ನಿನ್ನನ್ನು ಸ್ವರ್ಗಕ್ಕೋ ನರಕಕ್ಕೋ ಕರೆಯುವ ಗಂಟೆಯ ಶಬ್ದ," ಹೀಗೆ ಹೇಳುತ್ತಾ ಮ್ಯಾಕ್‌ಬೆತ್ ತನ್ನ ರಾಜನನ್ನೇ ಕೊಲ್ಲಲು ಹೊರಟ.

ಈ ಮಧ್ಯೆ ಲೇಡಿ ಮ್ಯಾಕ್‌ಬೆತ್‌ಳು




ಡಂಕನ್‌ನ ವೈಯಕ್ತಿಕ ಸಿಪಾಯಿಗಳು ಮದ್ಯಪಾನ ಮಾಡಿ ಮೈಮರೆಯುವಂತೆ ಮಾಡಿದ್ದಳು; ತನ್ನ ಗಂಡನು ಬಳಸಲು ಕಠಾರಿಯನ್ನು ಡಂಕನ್ನನ ಪಕ್ಕದಲ್ಲಿರಿಸಿದಳು. ಮ್ಯಾಕ್‌ಬೆತ್‌ನು ಹಿಂದಕ್ಕೆ ಬರುವುದನ್ನ ಕಾಯುತ್ತಿದ್ದಾಗ ಅವಳ ಮನಸ್ಸಿಗೆ ಸಮಾಧಾನವಿರಲಿಲ್ಲ. ಕೊಲೆಯ ಕೃತ್ಯದಲ್ಲಿ ತನ್ನ ಗಂಡನು ಸಿಕ್ಕಿಬೀಳಬಹುದೆಂದು ಅವಳಿಗೆ ಭಯವಾಯಿತು.


ಆದರೆ ಮ್ಯಾಕ್‌ಬೆತ್‌ನ ಕೈಗಳ ಮೇಲೆ ರಕ್ತ ಇದ್ದಂತೆ ಹಿಂದಿರುಗಿದಾಗ ಅವಳ ಮನಸ್ಸಿಗೆ ಸಮಾಧಾನವಾಯಿತು.

ಗಂಡ ಹೆಂಡತಿ ತಮ್ಮ ಕೊಠಡಿಗಳಿಗೆ ಹೋದರು. ಮ್ಯಾಕ್‌ಬೆತ್ ರಕ್ತವನ್ನು ತೊಳೆದುಕೊಂಡು ನಿದ್ದೆ ಮಾಡುತ್ತಿರುವಂತೆ ನಟಿಸಿದ. ಸ್ವಲ್ಪ ಹೊತ್ತಿನಲ್ಲಿಯೇ









ಬೆಳಗಾಯಿತು, ರಾಜನ ರಕ್ಷಕರಾದ ಮ್ಯಾಕ್‌ಡಫ್ ಮತ್ತು ರಾಸ್ ಡಂಕನ್‌ನನ್ನು ಎಬ್ಬಿಸಲು ಬಂದರು. ಆದರೆ ಅರಸನ ಕೊಲೆಯಾಗಿದೆ ಎಂದು ಅವರಿಗೆ ತಿಳಿದಾಗ ಎಲ್ಲ ಅಸ್ತವ್ಯಸ್ತವಾಯಿತು. ಕೂಡಲೆ ಅವರು ಗಟ್ಟಿಯಾಗಿ ಎಚ್ಚರಿಕೆ ಕೊಟ್ಟರು. ಸುದ್ದಿಯನ್ನು ಕೇಳಿದಾಗ ಮ್ಯಾಕ್‌ಬೆತ್‌ನು ತುಂಬಾ ರೋಷ ಬಂದಂತೆ ನಟಿಸಿದ. ಡಂಕನ್ ಮಲಗಿದ್ದ ಕೊಠಡಿಗೆ ನುಗ್ಗಿದ ಮತ್ತು

disruption



ಅಲ್ಲಿದ್ದ ಇಬ್ಬರು ರಕ್ಷಕರನ್ನು ಕೊಂದ. ಅವರು ಅರಸನ ಸಾವಿನಲ್ಲಿ ತಮ್ಮ ಪಾತ್ರ ಏನೂ ಇಲ್ಲ ಎಂದು ಹೇಳುವ ಮೊದಲೇ ಅವರ ಕೊಲೆಯಾದದ್ದರಿಂದ ಅಪರಾಧದ ಹೊಣೆ ಅವರದಾಯಿತು.

ರಾಜನ ಗಂಡು ಮಕ್ಕಳು ಮಾಲ್‌ಕಮ್ ಮತ್ತು ಡೊನಾಲ್‌ಬೆಯ್ನ್ ಸುದ್ದಿಯನ್ನು ಕೇಳಿ ಕೂಡಲೆ ತಮ್ಮ ಕೊಠಡಿಗಳಿಗೆ ಹೋದರು.



ದುಷ್ಟ ಕೊಲೆಗಾರರು ಇದಾದ ಮೇಲೆ ತಮ್ಮನ್ನು ಗುರಿಯಾಗಿ ಮಾಡಿಕೊಳ್ಳಬಹುದೆಂದು ಅವರಿಗೆ ಅರ್ಥವಾಯಿತು. ಇಬ್ಬರು ರಾಜಕುಮಾರರೂ ಕೂಡಲೇ ಸ್ಕಾಟ್ಲೆಂಡಿನಿಂದ ಓಡಿಹೋಗಲು ತೀರ್ಮಾನಿಸಿದರು. ಮಾಲ್‌ಕಮ್ ಇಂಗ್ಲೆಂಡಿಗೆ ಹೋಗಲು ನಿರ್ಧರಿಸಿದ. ಡೊನಾಲ್‌ಬೆಯ್ನ್ ಐರ್ಲೆಂಡಿಗೆ ಹೋಗಲು ನಿರ್ಧರಿಸಿದ. ಇದರಿಂದ ಇಬ್ಬರೂ ಕ್ಷೇಮವಾಗಿರಬಹುದಾಗಿತ್ತು.








ರಾಜಕುಮಾರರು ಓಡಿಹೋದಾಗ ಕೆಲವರು ಅವರೇ ತಮ್ಮ ತಂದೆಯ ಸಾವಿಗೆ ಕಾರಣವಾಗಿರಬಹುದೆ ಎಂದು ಅನುಮಾನಿಸಿದರು. ಸಿಂಹಾಸನಕ್ಕೆ ನ್ಯಾಯವಾಗಿ ವಾರಸುದಾರರಾದವರು ತಪ್ಪಿಸಿಕೊಂಡಿದ್ದರಿಂದ ಸ್ಕಾಟ್ಲೆಂಡಿನ ಹೊಸರಾಜನಾಗಿ ಮ್ಯಾಕ್‌ಬೆತ್‌ನ ಪಟ್ಟಾಭಿಷೇಕವಾಯಿತು. ಮಾಟಗಾತಿಯರ ಎರಡನೆಯ ಭವಿಷ್ಯವೂ ನಿಜವಾಯಿತು.

ಕೂಡಲೆ ಮ್ಯಾಕ್‌ಬೆತ್‌ನು ರಾಜನಾಗಿ ಕಾರ್ಯಪ್ರವೃತ್ತನಾದನು, ಆದರೆ ಅವನ ಮನಸ್ಸಿನ ಮೂಲೆಯಲ್ಲಿ ಚುಚ್ಚುತ್ತಿದ್ದ ಒಂದು ಯೋಚನೆಯಿತ್ತು. ಹಲವು ವರ್ಷಗಳಿಂದ ತನ್ನ ಹತ್ತಿರದ ಸ್ನೇಹಿತನಾಗಿದ್ದ ಬ್ಯಾಂಕೊ





ಏನೋ ಆಗಬಾರದ್ದು ಆಯಿತೆಂದು ಅನುಮಾನಪಡುತ್ತಾನೆ ಎಂದು ಅವನಿಗೆ ಆತಂಕವಾಗಿತ್ತು. ಏನೇ ಆಗಲಿ ಮಾಟಗಾತಿಯರ ಭವಿಷ್ಯವಾಣಿಗೆ ಬ್ಯಾಂಕೊ ಒಬ್ಬನೇ ಮತ್ತೊಬ್ಬ ಸಾಕ್ಷಿ. ಮ್ಯಾಕ್‌ಬೆತ್‌ನೇ ಕೊಲೆ ಮಾಡಿದ್ದಾನೆ ಎಂಬ ನಿರ್ಣಯಕ್ಕೆ ಅವನು ಬರಬಹುದು. ಆದುದರಿಂದ ಬ್ಯಾಂಕೊನ ಕೊಲೆಗೆ ಏರ್ಪಾಟು ಮಾಡಲು ತೀರ್ಮಾನಿಸಿದ.







ಅಂದು ರಾತ್ರಿ ಮ್ಯಾಕ್‌ಬೆತ್ ತನ್ನ ಸಹಾಯಕರು ಮತ್ತು ಮಂತ್ರಿಗಳಿಗೆ ಒಂದು ಔತಣಕೂಟವನ್ನು ಏರ್ಪಡಿಸಿದ. ಮಗ ಫ್ಲಿಯಾನ್ಸ್‌ನೊಡನೆ ಬ್ಯಾಂಕೊ ಭಾಗವಹಿಸುವ ನಿರೀಕ್ಷೆ ಇತ್ತು. ಆದರೆ ಬ್ಯಾಂಕೊಗಾಗಿ ಮ್ಯಾಕ್‌ಬೆತ್ ಬೇರೆ ಹಂಚಿಕೆ ಮಾಡಿದ್ದ. ಬ್ಯಾಂಕೊ ಹೊರಡುತ್ತಲೇ ಮೂವರು ಪೊದೆಯಿಂದ ಹೊರಕ್ಕೆ ಬಂದು ಅವನಿಗೆ ತಿವಿದರು. ಅವರು ಫ್ಲಿಯಾನ್ಸ್‌ನನ್ನು ಹಿಡಿಯಲು ಪ್ರಯತ್ನಿಸಿದರು.





ಆದರೆ ಕೊಲೆಗಡುಕರು ಹತ್ತಿರ ಬರುತ್ತಿದ್ದುದನ್ನು ಕಂಡ ಫ್ಲಿಯಾನ್ಸ್‌ನ ಕುದುರೆಯು ಕತ್ತಲಲ್ಲಿ ಓಡಿಹೋಯಿತು. ಹೀಗೆ ಅವನು ಉಳಿದುಕೊಂಡ.

ಆ ರಾತ್ರಿ ಔತಣಕೂಟ ಪ್ರಾರಂಭವಾದಾಗ ಮ್ಯಾಕ್‌ಬೆತ್‌ನು ಕುಳಿತುಕೊಳ್ಳಲು ಒಪ್ಪಲಿಲ್ಲ. ಇತರರೊಡನೆ ಸೇರಲು ಅವನನ್ನು ಆಹ್ವಾನಿಸಿದಾಗ, ಅವನಿಗಾಗಿ ಒಂದು ಕುರ್ಚಿಯನ್ನು ಖಾಲಿ ಬಿಟ್ಟಿದ್ದರೂ ಮ್ಯಾಕ್‌ಬೆತ್ ಅದನ್ನು ಕಾಣಲಿಲ್ಲ ಏಕೆಂದರೆ







ಆ ಕುರ್ಚಿಯಲ್ಲಿ ಬ್ಯಾಂಕೊನ ಪ್ರೇತ ಕುಳಿತಿತ್ತು. ಪ್ರೇತವು ಬೇರೆ ಯಾರಿಗೂ ಕಾಣಿಸಲಿಲ್ಲ. ಅತಿಥಿಗಳೆಲ್ಲ ಮ್ಯಾಕ್‌ಬೆತ್‌ಗೆ ಅನಾರೋಗ್ಯ ಎಂದುಕೊಂಡರು. ಕೊಲೆಪಾತಕನಾಗಿದ್ದ ಮ್ಯಾಕ್‌ಬೆತ್ ಮತ್ತೆ ಮತ್ತೆ, "ನಾನು ಇದನ್ನು ಮಾಡಿದೆನೆಂದು ಹೇಳಲು ನಿನಗೆ ಸಾಧ್ಯವಿಲ್ಲ. ರಕ್ತಸಿಕ್ತವಾದ ನಿನ್ನ ಕೂದಲನ್ನು ನನ್ನ ಕಡೆ ಅಲ್ಲಾಡಿಸಬೇಡ," ಎಂದು ಹೇಳುತ್ತಿದ್ದ. ತನ್ನ ಗಂಡನು ಅರೆ ಪ್ರಜ್ಞಾವಸ್ಥೆಯಲ್ಲಿದ್ದುದನ್ನು ನೋಡಿ ಅವನು ಹೇಳಬಾರದ ಗುಟ್ಟನ್ನು ಹೇಳಿಬಿಡಬಹುದೆಂದು ಲೇಡಿ ಮ್ಯಾಕ್‌ಬೆತ್‌ಗೆ ಹೆದರಿಕೆಯಾಯಿತು. ಆದುದರಿಂದ ಅವಳು ಕೂಡಲೇ ಅಲ್ಲಿದ್ದ ಎಲ್ಲರಿಗೂ





ಅವನಿಗೆ ಆರೋಗ್ಯವಿಲ್ಲವೆಂದು ಹೇಳಿ ಎಲ್ಲರೂ ಹೋಗುವಂತೆ ಹೇಳಿದಳು.

ಪೂರ್ಣ ಪ್ರಜ್ಞಾವಸ್ಥೆಗೆ ಮರಳಿದಾಗ ಭವಿಷ್ಯದಲ್ಲಿ ತನಗೆ ಏನಾಗುತ್ತದೆ ಎಂದು ತಿಳಿಯಬೇಕು, ಆದ್ದರಿಂದ ಮೂವರು ಮಾಟಗಾತಿಯರನ್ನು ಮತ್ತೆ ಕಾಣಬೇಕು ಎಂದು ಹೆಂಡತಿಗೆ ಹೇಳಿದ.







Bloodshed

ಮುಖವು ಕಂಡಿತು. ಅದು, "ರಕ್ತಪಾತ ನಡೆಸು, ಧೈರ್ಯವಾಗಿರು, ದೃಢ ಮನಸ್ಸಿನವನಾಗು, ಮನುಷ್ಯನ ಶಕ್ತಿಯನ್ನು ಕಂಡು ಹಾಸ್ಯಮಾಡಿ ನಗು, ಹೆಂಗಸಿನಿಂದ ಹುಟ್ಟಿದ ಯಾರೂ ಮ್ಯಾಕ್‌ಬೆತ್‌ಗೆ ಏನೂ ಮಾಡಲಾರರು" ಎಂದು ಹೇಳಿತು. ಈಗ ಮ್ಯಾಕ್‌ಬೆತ್‌ಗೆ ಬಹು ಸಂತೋಷವಾಯಿತು. ಏಕೆಂದರೆ ಅವನನ್ನು ಕೊಲ್ಲುವ ಮನುಷ್ಯ ಇನ್ನೂ ಹುಟ್ಟಿಲ್ಲ ಎಂದು ಸ್ಪಷ್ಟವಾಯಿತು. ಕಡೆಯದಾಗಿ ಮೂರನೆಯ ಭ್ರಾಂತಿಚಿತ್ರವು ಕಂಡು ಅವನಿಗೆ, "ಬರ್ನಮ್‌ನ ಮಹಾಕಾಡು ಮ್ಯಾಕ್‌ಬೆತ್‌ನ ವಿರುದ್ಧ ನಡೆದು ಬರುವವರೆಗೆ ಮ್ಯಾಕ್‌ಬೆತ್‌ಗೆ ಸೋಲಿಲ್ಲ," ಎಂದು ಹೇಳಿತು. ಮರಗಳು ತಮ್ಮ ಬೇರುಗಳನ್ನು ಕಿತ್ತುಕೊಂಡು ನಡೆಯುವುದು ಸಾಧ್ಯವಿಲ್ಲವಾದ್ದರಿಂದ ತನಗೆ ಸೋಲಿಲ್ಲ ಎಂದು ಮ್ಯಾಕ್‌ಬೆತ್ ಯೋಚನೆ ಮಾಡಿದ.



ಆದರೂ ಮ್ಯಾಕ್‌ಬೆತ್ ಅಕಸ್ಮಾತ್ತಾಗಿ ಏನಾದರೂ ಆಗುವುದಕ್ಕೆ ಅವಕಾಶವನ್ನು ಕೊಡಲು ಇಷ್ಟಪಡಲಿಲ್ಲ. ತಾನು ಕೂಲಿ ಕೊಟ್ಟು ಗೊತ್ತುಮಾಡಿದ್ದ ಕೊಲೆಗಾರರನ್ನು ಮ್ಯಾಕ್‌ಡಫ್‌ನ ಕೋಟೆ ಮನೆಗೆ ಕಳುಹಿಸಿದ. ಆದರೆ ಮ್ಯಾಕ್‌ಡಫ್ ಇಂಗ್ಲೆಂಡಿಗೆ ಹೊರಟು ಹೋಗಿದ್ದ. ಅವನು ಮನೆಯಲ್ಲಿಲ್ಲ ಎಂದು ತಿಳಿದ ಕೊಲೆಗಾರರು





ಮ್ಯಾಕ್‌ಡಫ್‌ನ ಹೆಂಡತಿ ಮತ್ತು ಮಗು ಸೇರಿದಂತೆ ಆ ಮನೆಯಲ್ಲಿದ್ದ ಎಲ್ಲರನ್ನೂ ಕೊಂದು ಹಾಕಿದರು.

ಮಾಲ್‌ಕಮ್ ಮತ್ತು ಮ್ಯಾಕ್‌ಡಫ್ ಇಂಗ್ಲೆಂಡಿನಲ್ಲಿ ಇದ್ದರು. ಸ್ಕಾಟ್ಲೆಂಡ್‌ನ ಏದ್ಯಮಾನಗಳನ್ನು ಕುರಿತು ಮಾತನಾಡುತ್ತಿದ್ದರು. ಮಾಲ್‌ಕಮ್‌ನು ತನ್ನ ಗೆಳೆಯನಿಗೆ ಇಂಗ್ಲೆಂಡಿನ ರಾಜ ಕುಟುಂಬವು





ಬಹಳ ಸಹಾಯ ಮಾಡಿತೆಂದೂ ಹತ್ತು ಸಾವಿರ ಸಮರ್ಥರಾದ ಸಿಪಾಯಿ ಸೈನ್ಯವನ್ನು ತನಗೆ ಕೊಟ್ಟಿತೆಂದೂ ಹೇಳಿದ ಸಿಂಹಾಸನವನ್ನು ಮ್ಯಾಕ್‌ಬೆತ್‌ನಿಂದ ಕಿತ್ತುಕೊಳ್ಳಲು ಸ್ವಲ್ಪ ಕಾಲದಲ್ಲಿಯೇ ಸ್ಕಾಟ್ಲೆಂಡ್ ಮೇಲೆ ಆಕ್ರಮಣ ಆಗುತ್ತದೆ ಎಂದು ಹೇಳಿದ.





ಅವರು ತಮ್ಮ ಹಂಚಿಕೆಗಳನ್ನು ರೂಪಿಸುತ್ತಿರುವಾಗಲೇ ರಾಸ್ ಆಗಮಿಸಿದ. ಅವನು ಆಗ ತಾನೇ ಸ್ಕಾಟ್ಲೆಂಡ್‌ನಿಂದ ಬಂದಿದ್ದ ಮತ್ತು ಸುದ್ದಿಯನ್ನು ತಂದಿದ್ದ. ಮ್ಯಾಕ್‌ಡಫ್‌ಗೆ ಅವನ ಕೋಟೆಮನೆಯಲ್ಲಿ ನಡೆದಿದ್ದ ದುರದೃಷ್ಟದ ಘಟನೆ ಮತ್ತು ಅವನ ಹೆಂಡತಿ ಮತ್ತು ಮಗುವಿನ ಸಾವು ಇವುಗಳ ಸುದ್ದಿ ತಂದಿದ್ದ. ತಾನು ಸ್ಕಾಟ್ಲೆಂಡಿಗೆ ಹಿಂತಿರುಗಿ ಈ ಪಾಪಕೃತ್ಯವನ್ನು ಮಾಡಿದವನ ಮೇಲೆ ಮುಯ್ಯಿ ತೀರಿಸಿಕೊಳ್ಳುವುದಾಗಿ ಮ್ಯಾಕ್‌ಡಫ್ ಪ್ರತಿಜ್ಞೆ ಮಾಡಿದ.






ಸ್ಕಾಟ್ಲೆಂಡಿನ ವಿರುದ್ಧ ಯುದ್ಧ ಮಾಡಲು ಇಂಗ್ಲೆಂಡಿನಲ್ಲಿ ಚರ್ಚೆ ನಡೆಯುತ್ತಿದ್ದಾಗಲೇ ಸ್ಕಾಟ್ಲೆಂಡ್‌ನ ಅರಸನ ಅರಮನೆಯಲ್ಲಿ ಬಹು ವಿಚಿತ್ರ ಸಂಗತಿ ನಡೆಯುತ್ತಿತ್ತು. ಒಂದು ರಾತ್ರಿ ಬರುವಂತೆ ರಾಣಿಯು ಸಖಿ ವೈದ್ಯನಿಗೆ ಹೇಳಿ ಕಳುಹಿಸಿದ್ದಳು.





ಏಕೆಂದರೆ ಅವನೇ ಕಣ್ಣಾರೆ ನೋಡಬೇಕಾಗಿದ್ದ ವಿಚಿತ್ರ ಸಂಗತಿ ನಡೆಯುತ್ತಿತ್ತು. ಎಲ್ಲರೂ ನಿದ್ರೆ ಮಾಡಿದ ಮೇಲೆ ಸ್ವಲ್ಪ ಕಾಲ ಕಾಯಬೇಕಾಯಿತು. ಆಗ ಇದ್ದಕ್ಕಿದ್ದಂತೆ ಒಂದು ಬಾಗಿಲು ತೆರೆದುಕೊಂಡ ಶಬ್ದ ಕೇಳಿತು ಮತ್ತು ಒಂದು ಮೋಂಬತ್ತಿಯ ಬೆಳಕು ಕೊಠಡಿಯನ್ನು ತುಂಬಿತು.





ರಾಣಿ ಒಳಕ್ಕೆ ಬಂದಳು. ಅವಳು ಒಂದು ಸುಪ್ತ ಸ್ಥಿತಿಯಲ್ಲಿ ಇದ್ದಂತೆ ಕಂಡು ಬಂದಿತು. ಅವಳು, "ತೊಲಗು, ತೊಲಗು, ಹಾಳು ಕಲೆಯೇ", ಎಂದು ಹೇಳುತ್ತಿದ್ದಳು.





ಅವಳು ಸಾವು ಮತ್ತು ರಕ್ತದ ವಿಷಯ ಗೊಣಗುತ್ತಿದ್ದಳು. ಒಮ್ಮೆ ಮ್ಯಾಕ್‌ಡಫ್‌ನ ಹೆಂಡತಿಯನ್ನು ಜ್ಞಾಪಿಸಿಕೊಂಡಳು. ಕಡೆಗೆ ಅವಳು, "ಈ ಕೈಗಳು ಶುದ್ಧವಾಗುವುದೇ ಇಲ್ಲವೆ? ಅರೇಬಿಯದ ಎಲ್ಲ ಸುವಾಸನಾ ದ್ರವ್ಯಗಳು ಈ ಪುಟ್ಟ ಕೈಗಳಿಗೆ ಸುವಾಸನೆಯನ್ನು ತರಲಾರವು", ಎಂದು ಉದ್ಗಾರ ತೆಗೆದಳು. ಅನಂತರ ಅವಳು ಎಷ್ಟು ವಿಚಿತ್ರ ರೀತಿಯಲ್ಲಿ ಬಂದಿದ್ದಳೊ ಅಷ್ಟೇ ವಿಚಿತ್ರ ರೀತಿಯಲ್ಲಿ ಹೊರಟಳು.

ಮಾಲ್‌ಕಮ್ ಮತ್ತು ಮ್ಯಾಕ್‌ಡಫ್‌ನ ನಾಯಕತ್ವದಲ್ಲಿ ಇಂಗ್ಲಿಷ್ ಸೈನ್ಯವು ಬಂದಿತು ಎನ್ನುವ ಸುದ್ದಿಯು ಸ್ಕಾಟ್ಲೆಂಡ್‌ನಲ್ಲೆಲ್ಲ ತುಂಬಿತು. ಅವರ ಚಲನೆಯನ್ನು ಎಚ್ಚರಿಕೆಯಿಂದ ಗಮನಿಸುವಂತೆ ಮ್ಯಾಕ್‌ಬೆತ್ ಕೂಡಲೆ ಅಪ್ಪಣೆ ಮಾಡಿದ,










ಆಕ್ರಮಣ ನಡೆದರೆ ಡನ್ಸಿನೇನ್ ಗುಡ್ಡದ ಮೇಲಿನ ದುರ್ಗದ ಮನೆಯನ್ನು ರಕ್ಷಿಸುವಂತೆ ಸೈನ್ಯವನ್ನು ಅವರ ಶಿಬಿರದಿಂದ ತಂದ.

ಸ್ಕಾಟ್ಲೆಂಡ್‌ನ ಸೈನ್ಯವು ಯುದ್ಧಕ್ಕೆ ಸಿದ್ಧವಾಗುತ್ತಿದ್ದಾಗ ಇಂಗ್ಲಿಷ್ ಸೈನ್ಯವು ಬರ್ನಮ್ ಕಾಡಿನಲ್ಲಿ ವಿಶ್ರಮಿಸಿತು. ದುರ್ಗದ ಮನೆಗೆ ಮುತ್ತಿಗೆ ಹಾಕುವ ಮೊದಲು ಕೆಲವು ರೆಂಬೆಗಳನ್ನು ಕತ್ತರಿಸಿ ತಮ್ಮ ದೇಹಗಳಿಗೆ ಕಟ್ಟಿಕೊಳ್ಳುವಂತೆ ಮಾಲ್‌ಕಮ್ ತನ್ನ ಸೈನಿಕರಿಗೆ ಆಜ್ಞೆ ಮಾಡಿದ. ಇದರಿಂದ ಅವರ ಸಂಖ್ಯೆಯು ಸರಿಯಾಗಿ ತಿಳಿಯುತ್ತಿರಲಿಲ್ಲ.







ಸ್ವಲ್ಪ ಹೊತ್ತಿನಲ್ಲಿಯೇ ಒಬ್ಬ ಸೈನಿಕನು ಮ್ಯಾಕ್‌ಬೆತ್‌ನಿಗೆ ಕಾಡು ದುರ್ಗದ ಮನೆಯತ್ತ ಬರುತ್ತಿದೆ ಎಂದು ಹೇಳಿದ. ಕೂಡಲೆ ಮ್ಯಾಕ್‌ಬೆತ್‌ನಿಗೆ ಮೂವರು ಮಾಟಗಾತಿಯರ ಎದುರಿನಲ್ಲಿ ಮೂಡಿದ ಅತಿಮಾನುಷ ವ್ಯಕ್ತಿ ಮಹಾನ್ ಬರ್ನಾಮ್ ಕಾಡು ಡನ್ಸಿನೇನ್ ಗುಡ್ಡದತ್ತ ನಡೆದು ಬರುವವರೆಗೆ ತಾನು ಪ್ರಭುವಾಗಿರುತ್ತೇನೆ ಎಂದು ಎಚ್ಚರಿಕೆ ಕೊಟ್ಟದ್ದು ನೆನಪಿಗೆ ಬಂತು. ಮುಂದೇನು ಮಾಡಬೇಕು ಎಂದು ಯೋಚಿಸುತ್ತಿದ್ದಾಗ ಅರಮನೆಯೊಳಗಿನಿಂದ ಅಳುವಿನ ಶಬ್ದ ಕೇಳಿಸಿತು.




ಲೇಡಿ ಮ್ಯಾಕ್‌ಬೆತ್‌ಳು ಚಾವಣಿಯಿಂದ ಹಾರಿ ಪ್ರಾಣ ಬಿಟ್ಟಿದ್ದಳು.

ತನ್ನ ಕಾಲವು ಕೊನೆಗೆ ಬರುತ್ತಿದೆ ಎಂದು ಮ್ಯಾಕ್‌ಬೆತ್‌ಗೆ ಗೊತ್ತಾಯಿತು. ಆದರೂ ಹೆಂಗಸಿನಿಂದ ಹುಟ್ಟಿದ ಯಾವ ಮನುಷ್ಯನೂ ತನ್ನನ್ನು ಕೊಲ್ಲಲಾರ ಎಂದು ಕಡೆಯ ಅತಿಮಾನುಷ ವ್ಯಕ್ತಿ ಹೇಳಿದ್ದ ಮಾತಿನಿಂದ ಸಮಾಧಾನವಾಯಿತು. ಕವಚವನ್ನು ಧರಿಸಿ ತನ್ನ ದುರ್ಗದ ಮನೆಯನ್ನು ಬಿಡಲು ನಿರ್ಧರಿಸಿದ.



ಅವನು ಕೋಟೆಯಿಂದ ಹೊರಕ್ಕೆ ಬಂದಾಗ ಮ್ಯಾಕ್‌ಡಫ್‌ನು ಎದುರಾದ. ಅವನೊಂದಿಗೆ ಯುದ್ಧ ಮಾಡದೇ ಮುಂದೆ ಹೋಗಲು ಮ್ಯಾಕ್‌ಬೆತ್ ಪ್ರಯತ್ನಿಸಿದ. ಆದರೆ ತನ್ನ ಸಂಸಾರದವರ ಕೊಲೆಯಿಂದ ರೋಷಾವಿಷ್ಟನಾಗಿದ್ದ ಮ್ಯಾಕ್‌ಡಫ್



ಇನ್ನೇನು ಮಾಡಲೂ ಬಿಡಲಿಲ್ಲ. ಸ್ವಲ್ಪ ಹೊತ್ತು ಅವರ ಕತ್ತಿಗಳು ಹೋರಾಡಿದವು. ಆದರೆ ಇಬ್ಬರಲ್ಲಿ ಯಾರ ಕೈಯೂ ಮೇಲಾಗಲಿಲ್ಲ.

ಆಗ ಮ್ಯಾಕ್‌ಬೆತ್ ಹೆಂಗಸಿನಲ್ಲಿ ಹುಟ್ಟಿದವರು ಯಾರೂ ತನ್ನನ್ನು ಕೊಲ್ಲಲಾರರು ಮತ್ತು ಮ್ಯಾಕ್‌ಡಫ್ ತನ್ನ ಕಾಲವನ್ನು ವ್ಯರ್ಥಮಾಡುತ್ತಿದ್ದಾನೆ ಎಂದು ಹೇಳಿದ. ಇದಕ್ಕೆ ಉತ್ತರವಾಗಿ ಮ್ಯಾಕ್‌ಡಫ್ ಹಾಗಾದರೆ ನಿನಗೆ ಒಂದು ಮಾತನ್ನು ಹೇಳಬೇಕು. ಕಾಲಕ್ಕೆ ಮೊದಲೇ ವೈದ್ಯನು ನನ್ನನ್ನು ತಾಯಿಯ ಗರ್ಭದಿಂದ ಹೊರಕ್ಕೆ ತೆಗೆದ. ನಾನು ಸರಿಯಾದ ರೀತಿಯಲ್ಲಿ ಹುಟ್ಟಲಿಲ್ಲ ಎಂದು ಹೇಳಿದ. ಈ ಯುದ್ಧದಿಂದ ಜೀವಂತ ಉಳಿಯುವುದಿಲ್ಲ ಎಂದು ಮ್ಯಾಕ್‌ಬೆತ್‌ಗೆ ಗೊತ್ತಾಯಿತು. ಸ್ವಲ್ಪ ಹೊತ್ತು ಹೋರಾಡಿದ, ನಂತರ ಕತ್ತಿಗಳ ಶಬ್ದ ನಿಂತಿತು.





ಧೀರ ಮ್ಯಾಕ್‌ಡಫ್‌ನ ಕಾಲ ಬಳಿ ಮ್ಯಾಕ್‌ಬೆತ್ ಬಿದ್ದ. ಎಲ್ಲ ಭವಿಷ್ಯಗಳು ನಿಜವಾಗಿದ್ದವು.

ಮ್ಯಾಕ್‌ಬೆತ್ ಸತ್ತದ್ದರಿಂದ, ತನ್ನ ತಂದೆಯ ಸಾವಿನ ನಂತರ ನ್ಯಾಯವಾಗಿ ತನ್ನದೇ ಆಗಿದ ಸಿಂಹಾಸನವನ್ನು ಮಾಲ್‌ಕಮ್ ಪಡೆದುಕೊಂಡ. ಅವನ ಆಡಳಿತದಲ್ಲಿ ಸ್ಕಾಟ್ಲೆಂಡ್ ಮತ್ತೆ ತನ್ನ ಹಿಂದಿನ ವೈಭವಕ್ಕೆ ಮರಳಿತು. ಮ್ಯಾಕ್‌ಬೆತ್‌ನ ದುಷ್ಟಕಾಲ ಎಂದೆಂದಿಗೂ ಮುಗಿದುಹೋಯಿತು.

